ತುಮಕೂರು ಜಿಲ್ಲೆಯ ಬೆಳ್ಳಾವೆ ಮಜರೆ ಗ್ರಾಮದ ತಿಗಳರ ಗೊಲ್ಲಹಳ್ಳಿಯ ಜಿ.ವಿ.ಆನಂದಮೂರ್ತಿ ಕನ್ನಡದ ಪ್ರಮುಖ ಕಥೆಗಾರ, ಪ್ರಬಂಧಕಾರರಲ್ಲೊಬ್ಬರು. ಜನಪದ ಸಂಸ್ಕೃತಿಯ ಬಗೆಗಿನ ಅವರ ಆಸಕ್ತಿ–ಕಾಳಜಿ ಬರವಣಿಗೆಯಲ್ಲೂ ಮೂಡಿದೆ. 'ನೀರಗಂಧ' (ಕಾವ್ಯ), 'ಜಾಲಾರ ಹೂವು', 'ಕರುಣೆಯ ಹೊಲ' (ಪ್ರಬಂಧಗಳು), 'ಗುಣಸಾಗರಿ ಮತ್ತು ಇತರ ಕಥೆಗಳು' (ಕಥೆಗಳು), 'ಗರಿಗೆದರಿದ ನವಿಲು' (ಜನಪದ ಕಲಾವಿದರ ಆತ್ಮಕಥೆಗಳ ನಿರೂಪಣೆ), 'ಸಾಲ ಸಂಪಿಗೆ ನೆರಳು' (ಎಳೆಯರಿಗಾಗಿ ಜಾನಪದ) ಆನಂದಮೂರ್ತಿಯವರ ಕೆಲವು ಕೃತಿಗಳು.

ಅಥವಾ ಬೆಳ್ಳಾವಿ ಸಂತೆಯಲ್ಲೋ ಮಾರಾಟ ಮಾಡುತ್ತಿದ್ದರು. ಇದೇ ಅವರ ಕುಟುಂಬಗಳ ದುಡಿಮೆಯಾಗಿತ್ತು. ಯಾರ ಮುಂದೆಯೂ ಕೈಚಾಚದೆ ಸ್ವಾಭಿಮಾನದಿಂದ ಬದುಕುತ್ತಿದ್ದ ಕುಟುಂಬ ಅವರದು. ಕೇರಿಯಲ್ಲಿ ನಡೆಯುವ ಯಾವುದೇ ಮದುವೆ, ಸಾವು, ದೇವರ ಕಾರ್ಯಗಳಲ್ಲಿ ಇವರಿಬ್ಬರೂ ಪಾಲುಮಾರಿಕೆ ಮಾಡದೆ ಪಾಲ್ಗೊಳ್ಳುತ್ತಿದ್ದರು. ನೈತಿಕ ಗುಣಗಳಿಂದ ಬೇರ್ಪಡೆಯಾಗದ ಸಕಾರಾತ್ಮಕ ನಡವಳಿಕೆ ಅವರದಾಗಿತ್ತು. ಎಲ್ಲ ಧರ್ಮಗಳ ಮೂಲ ತತ್ತ್ವವಾಗಿರುವ ಸಮನ್ವಯ ಹಾಗೂ ಮಾನವತೆಯ ಗುಣವನ್ನು ಅವರು ತಮ್ಮ ಬದುಕಿನುದ್ದಕ್ಕೂ ಸಾಧಿಸಿ ತೋರಿಸಿದರು. ಯುಗಾದಿ, ಗೌರಿ, ಸಂಕ್ರಾಂತಿ ಹಬ್ಬಗಳಲ್ಲಿ ಕೇರಿಯ ಎಲ್ಲರ ಮನೆಗಳಲ್ಲೂ ಮಾಡಿರುತ್ತಿದ್ದ ಹಬ್ಬದ ಅಡುಗೆ ಇವರಿಬ್ಬರ ಕುಟುಂಬಗಳಿಗೆ ತಪ್ಪದೆ ಬರುತ್ತಿತ್ತು! ಇಷ್ಟರಮಟ್ಟಿಗೆ ಈ ಎರಡು ಕುಟುಂಬಗಳು ನಮ್ಮೊಳಗೆ ಹಾಸುಹೊಕ್ಕಾಗಿದ್ದವು. ಇವರಿಬ್ಬರೂ ಯಾವ ಕಾಲದಲ್ಲಿ ನಮ್ಮ ಕೇರಿಗೆ ಬಂದರು ಎನ್ನುವುದು ನನಗೆ ಗೊತ್ತಿಲ್ಲ! ಅವರ ಕುಟುಂಬದ ಹಿನ್ನೆಲೆ ಕುರಿತು ಕುತೂಹಲದಿಂದ ಒಮ್ಮೆ ಖಲಂದರ್ ಸಾಹೇಬರನ್ನೇ ಕೇಳಿದೆ, ಅವರು ಹೇಳಿದ ದೇಶಕ್ಕಾಗಿ ಬಲಿದಾನ ಮಾಡಿದ ಅಜ್ಞಾತ ಕುಟುಂಬದ ಕಥೆಯನ್ನೇ ನಿಮ್ಮ ಮುಂದಿಡುತ್ತಿದ್ದೇನೆ:

ದೇಶಕ್ಕೆ ಸ್ವಾತಂತ್ರ್ಯ ದೊರೆಯುವ ಮುಂಚೆ ಅವರ ತಂದೆ ಪೀರ್ ಬಾಷಾ. ಬಳ್ಳಾರಿಯಲ್ಲಿ ತಮ್ಮ ಪತ್ನಿ ನೂರ್‌ಜಾನ್ ಮತ್ತು ಇಬ್ಬರು ಮಕ್ಕಳು ಖಲಂದರ್ ಮತ್ತು ಪೀರ್ ಅವರೊಂದಿಗೆ ವಾಸವಾಗಿದ್ದರು. ಪೀರ್ ಬಾಷಾ ಅವರು ಹಾಸಿಗೆ ಹೊಲಿಯುವ ಒಬ್ಬ ಸಾಮಾನ್ಯ ಕೂಲಿಕಾರರಾಗಿದ್ದರು. ಈ ಕುಟುಂಬ ಬಡತನದ ನೊಗ ಹೊತ್ತು ಕಡುಕಷ್ಟದಲ್ಲಿ ನಡೆಯುತ್ತಿತ್ತು. ಕುಟುಂಬದ ನಿರ್ವಹಣೆಗೆ ಹೆಚ್ಚಿನ ನಿಗಾ ಕೊಡದ ಪೀರ್ ಬಾಷಾ ನಾಟಕಗಳಲ್ಲಿ ಅಭಿನಯಿಸುವ ಪ್ರಖ್ಯಾತರಲ್ಲದ ಕಲಾವಿದರೂ ಆಗಿದ್ದರು. ದೇವರ ವರವೋ ಏನೋ ಬಹು ಸೊಗಸಾಗಿ ಹಾಡುವ ಕಂಠವೂ ಇವರಿಗಿತ್ತು. ಗಾಲಿಬ್, ಕಬೀರ ಮತ್ತು ಶರೀಫರ ವಚನಗಳನ್ನು ಸೊಗಸಾಗಿ ಹಾಡುತ್ತಿದ್ದರು. ಇವರ ಹಾಡಿಗೆ ಎಲ್ಲರೂ ತಾರೀಫ್ ಮಾಡುತ್ತಿದ್ದರು.

ಆಗ ಸ್ವಾತಂತ್ರ್ಯ ಚಳವಳಿ ಬಿರುಸಾಗಿತ್ತು. ಪೀರ್ ಬಾಷಾ ಅವರು ಗಾಂಧೀಜಿ ಅವರ ಸತ್ಯಾಗ್ರಹದ ಮಾತುಗಳಿಗೆ ಮನಸೋತು ಒಂದು ದಿನ ದೇಶ ವಿಮೋಚನೆಯ ಆಂದೋಲನಕ್ಕೆ ಧುಮುಕಿದರು. ತಾವು ಅಭಿನಯಿಸುತ್ತಿದ್ದ ನಾಟಕಗಳಲ್ಲಿ ಜನರಿಗೆ ದೇಶ ಪ್ರೇಮದ ಬಗ್ಗೆ ಅಭಿನಯಿಸುತ್ತಲೇ ತಿಳಿಸುತ್ತಿದ್ದರು. ಇದರಿಂದಾಗಿ ಪೊಲೀಸರು ಇವರ ಬೆನ್ನುಬಿದ್ದರು. ಇದರ ಜೊತೆಗೆ ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಿಸಬೇಕು ಎನ್ನುವ ಕೂಗಿಗೂ ಇವರ ಧ್ವನಿ ಸೇರಿತು. ಇವರನ್ನು ಸೆರೆಹಿಡಿಯಲು ಪೊಲೀಸರು ಹಗಲು-ಇರುಳು ಬಲೆಬೀಸಿದರು. ಹೀಗಾಗಿ ತಿಂಗಳು, ವರ್ಷಗಳ ಕಾಲ ಪೀರ್ ಬಾಷಾ ಅವರು ಮನೆಗೇ ಬರುತ್ತಿರಲಿಲ್ಲ! ಕೆಲವು ಸಲ ಸನ್ಯಾಸಿಗಳ ವೇಷದಲ್ಲಿ ಹಳ್ಳಿಗಳಿಗೆ ಹೋಗಿ ಸ್ವಾತಂತ್ರ್ಯದ ಬಗ್ಗೆ, ಕನ್ನಡ ನಾಡು ಒಂದಾಗುವ ಬಗ್ಗೆ ಜನರಿಗೆ ಹೇಳುತ್ತಿದ್ದರಂತೆ! ಒಂದು ದಿನ ಗಾಂಧೀಜಿಯವರ ಹಿಂದೆಯೇ ಹೋಗಿ ಅನಾಮಿಕರಾಗಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಮರಳಿ ಬಂದರಂತೆ! ಹೀಗಾಗಿ ಅನೇಕ ವರ್ಷಗಳ ಜೈಲುವಾಸ, ಸತ್ಯಾಗ್ರಹಗಳಲ್ಲೇ ಅವರು ತಮ್ಮ ಪ್ರಾಯವನ್ನು ಸವೆಸಿದರು.

'ಕತ್ತಿಯನ್ನು ಎಸೆದವರ ಮೇಲೆ ಪ್ರೇಮದ